ದಲ್ಲಿಲ್ಲದ ಭೂತ, ಭವಿಷ್ಯತ್ತುಗಳನ್ನು ಬಿಟ್ಟು ವರ್ತಮಾನವೊಂದನ್ನೇ ಚಿಂತಿಸತೊಡಗಿದರೆ ಅದೂ ಇಲ್ಲದಾಗುವುದು; ಕಾಲವೊಂದು ವಿಸ್ಮಯವೆನಿಸುವುದು. ಇದು ನಮ್ಮ ಐಹಿಕ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡುವುದು. ಈ ಬಗೆಯ ಚಿಂತನೆ ನಮ್ಮನ್ನು ಶಾಶ್ವತವಾದ ಸತ್ಯದೆಡೆಗೆ ಒಯ್ಯುವುದು.

*ವಿನಾಶ:* ಎಲ್ಲವೂ ಸಹಜವಾಗಿದ್ದಾಗ, ಜೀವನದ ಕಾರ್ಯಕಲಾಪಗಳೆಲ್ಲ ಎಂದಿನಂತೆ ನಡೆಯುತ್ತಿದ್ದಾಗ ಇದ್ದಕ್ಕಿದ್ದಂತೆ ಆಘಾತಕಾರಿಯಾದ ಸುದ್ದಿ ಬಂದುಬಿಡುತ್ತದೆ. ಅಪಘಾತ, ಪ್ರಕೃತಿ ವಿಕೋಪ, ದುರ್ಘಟನೆ, ಅನಾಚಾರ, ಯುದ್ಧ, ಸಾವು – ಹೀಗೆ ಅನಿರೀಕ್ಷಿತಗಳಿಗೆ ಕೊನೆಯಿಲ್ಲ. ಮಾನವ ಸಹಜತೆಯನ್ನೇ ಬಯಸುತ್ತಾನೆ; 'ಎಲ್ಲವೂ ಚೆನ್ನಾಗಿದೆ' ಎಂಬ ಅವಸ್ಥೆಗಾಗಿಯೇ ಹೋರಾಡುತ್ತಾನೆ. ಆದರೆ ಎಲ್ಲವನ್ನೂ ಬುಡಮೇಲು ಮಾಡುವುದು ನಿಸರ್ಗದ ನಿಯಮ, ಪ್ರಕೃತಿಯ ಶಕ್ತಿ. ಇದನ್ನು ಅವನು ಸಹಿಸಲಾರ. ವಿನಾಶದ ಪರಿಣಾಮದಿಂದ ತತ್ತರಿಸುತ್ತ ಅವನು ಗೋಳಿಡುತ್ತಾನೆ. ತಡೆಯಲಾರದ ಸಂಕಟದಿಂದ ಚಿಂತಾಕ್ರಾಂತನಾಗುತ್ತಾನೆ. 'ಎಲ್ಲವೂ ಕಳಚಿಬಿದ್ದಂತಹ' ಭಾವನೆ ಅವನನ್ನು ಆವರಿಸುತ್ತದೆ. ಗ್ರೀಕ್ ದುರಂತ ನಾಟಕಗಳಲ್ಲಿ ಇದೇ ಭಾವವನ್ನು ಹಲವು ರೀತಿಯಲ್ಲಿ ಬಿಂಬಿಸಲಾಗಿದೆ. ಈ ಭಾವದ ನಡುವೆ ಕೆಲವರಿಗೆ ಜೀವನದ ನಶ್ವರತೆ ಗೋಚರವಾಗುವುದು. ವೈರಾಗ್ಯ, ಸತ್ಯಾನ್ವೇಷಣೆ, ತ್ಯಾಗ ಮನೋಭಾವ ಹುಟ್ಟಿಕೊಂಡು, ಅವರ ಜೀವನ ಹೊಸ ದಿಕ್ಕಿನಲ್ಲಿ ಸಾಗತೊಡಗುವುದು. ಹೀಗೆ ವಿನಾಶವೂ 'ಅನಂತ'ದ ಸೂಚಕವಾಗಿ ಕೆಲಸ ಮಾಡುವುದು.

*ಮುಪ್ಪು :* ಸಾಮಾನ್ಯವಾಗಿ ವೈರಾಗ್ಯ, ಆಧ್ಯಾತ್ಮ ಇವೆಲ್ಲ ಬರುವುದು ಅರವತ್ತು ವರ್ಷ ವಯಸ್ಸಿನ ನಂತರ ಎಂಬುದೊಂದು ಮಾತಿದೆ. ಇದಕ್ಕೂ ಕಾರಣವಿಲ್ಲದಿಲ್ಲ. ದೇಹ, ಮನಸ್ಸು, ಆರೋಗ್ಯದಿಂದ್ದಾಗ ಜೀವನ ಸಲೀಸಾಗಿ ನಡೆಯುತ್ತದೆ. ಹಲ್ಲು ಬಿದ್ದು, ಕೂದಲು ನರೆ ಬಂದು, ಚರ್ಮ ಸಡಿಲವಾದಾಗ, ಕಣ್ಣು ಮಂಜಾಗಿ ಏನೂ ಕಾಣಿಸದೆ ಹೋದಾಗ, ಎಲುಬುಗೂಡು ಕೆಲಸ ಮಾಡುವುದು ಕಷ್ಟವಾದಾಗ ಮನುಷ್ಯ ಚಿಂತೆ ಮಾಡತೊಡಗುತ್ತಾನೆ. ತನ್ನ ಜೀವನದ ಗತಕಾಲವೈಭವವನ್ನೆಲ್ಲ ಮೆಲುಕು ಹಾಕುತ್ತ, ಮುಂದೆ ಏನನ್ನೂ ಅನುಭವಿಸಲಾಗದ ಅಸಹಾಯಕತೆಗಾಗಿ ಗೊಣಗುತ್ತ ಅವನು ಕಾಲಯಾಪನೆ ಮಾಡುತ್ತಾನೆ. ಸಾವಿನ ನಿರೀಕ್ಷೆ ಮಾಡುತ್ತ ಅವನು ಬಾಳಿನ ಸಂಜೆಯ ದಿನಗಳನ್ನು ಕಳೆಯುತ್ತಿದ್ದಂತೆ, ಹಿಂದೆ ಎಲ್ಲೋ ಕೇಳಿದ ವೇದಾಂತ ವಿಚಾರಗಳು ನೆನಪಾಗುತ್ತವೆ. 'ಎಲ್ಲವೂ ಸುಳ್ಳು. ಶಾಶ್ವತವಾದದ್ದೆಂದರೆ ಭಗವಂತನೊಬ್ಬನೇ' ಎಂಬ ವಿಚಾರ ಸತ್ಯವಿರಬಹುದೇ ಎಂದು ಭಾವಿಸತೊಡಗುತ್ತಾನೆ. ಆದರೆ ಅನೇಕರು ಎಳೆಯ ವಯಸ್ಸಿನಿಂದಲೇ ಇಂಥ ವಿಚಾರಗಳಲ್ಲಿ ತೊಡಗಿ, ಮುಪ್ಪಿನ ತೊಂದರೆಗಳನ್ನು ಹಾಗೂ ಸಾವಿನ ಅನಿವಾರ್ಯ ದಿನವನ್ನು ಎದುರಿಸಲು ಸಿದ್ಧರಾಗುತ್ತಾರೆ. ಅವರಲ್ಲಿ ಈ ನಶ್ವರ ಬದುಕನ್ನು ಮೀರಿ, ಅನಂತ ಜೀವನವನ್ನು ತಬ್ಬುವ ಹಂಬಲ ಮೊಳೆತಿರುತ್ತದೆ.

ಪ್ರಪಂಚವನ್ನು, ಬದುಕನ್ನು ಹಾಗೂ ನಮ್ಮನ್ನು ತಿಳಿದುಕೊಳ್ಳುವ ರೀತಿಯಲ್ಲೇ ಒಂದು ಬಗೆಯ ತೊಡಕು ಇದೆ. ನಮ್ಮ ಜೀವನ, ನಮ್ಮ ಸುತ್ತಣ ಪ್ರಪಂಚ ಹಾಗೂ ನಮ್ಮ ಕಾಲಾವಧಿ – ಈ ಮಿತಿಯೊಳಗೇ ನಾವು ಚಿಂತಿಸುತ್ತೇವೆ, ಪ್ರತಿಯೊಂದನ್ನೂ ಗ್ರಹಿಸುತ್ತೇವೆ. ಐನೂರು, ಸಾವಿರ ವರ್ಷಗಳ ಹಿಂದೆ ಜನ ಹೇಗಿದ್ದರು, ಹೇಗೆ ಚಿಂತಿಸುತ್ತಿದ್ದರು, ಜಗತ್ತು ಹೇಗಿತ್ತು ಎಂದು ನಾವು ಸ್ಪಷ್ಟವಾಗಿ ಗ್ರಹಿಸಲಾರೆವು. ಇದೇ ರೀತಿ ಭವಿಷ್ಯವನ್ನು ಕೂಡ. ಕೆಲವೊಮ್ಮೆ ಸಹಸ್ರಾರು ವರ್ಷಗಳ ಹಿಂದಿನ ಸಂಗತಿಯನ್ನು ಕುರಿತು ಆಳವಾಗಿ ಚಿಂತಿಸುವಾಗ ಇದ್ದಕ್ಕಿದ್ದಂತೆ ನಮ್ಮ ಮನಸ್ಸು ಕಾಲ-ದೇಶಗಳ ಮಿತಿಯನ್ನು ಮೀರಿ ನಿಂತು, 'ಇದೆಲ್ಲ ಏನು?' ಎಂದು ಚಿಂತಿಸುತ್ತದೆ. ನಮ್ಮ ಸೀಮಿತ ಬದುಕು, ಸೀಮಿತ ದೃಷ್ಟಿ ಅರ್ಥವಿಲ್ಲದ ಒಂದು ಸಾಪೇಕ್ಷ ಸತ್ಯವಾಗಿ ಕಂಡುಬರುತ್ತದೆ. ಮತ್ತೆ ನಮ್ಮ ಸೀಮಿತ ದೃಷ್ಟಿಕೋನ ನಮ್ಮ ಮನಸ್ಸನ್ನು ಆವರಿಸುವ ಮುನ್ನ ಇಂಥ 'ಮಿತಿಯಾಚೆಗಿನ' ಇಣುಕು ನೋಟವನ್ನೇ ಬಲವಾಗಿ ಹಿಡಿದು ಮುಂದುವರಿಯಬೇಕು. ಅದು ಅನಂತ ಜೀವನದ ಕೆಲವು ಒಳನೋಟಗಳನ್ನು ನೀಡುವುದು. ಆಗ ಜನನ-ಮರಣ, ಸುಖ-ದುಃಖ, ಏರುಪೇರುಗಳು, ಜೀವ-ಜೀವಗಳ ಒಡನಾಟ, ವಿಭಿನ್ನ ಅನುಭವಗಳ ಸರಪಳಿ ಇವೆಲ್ಲ ಒಂದು ನಿರಂತರ ಯಾನದಂತೆ ಕಂಡುಬರುವುದು. ನಮ್ಮ ಜೀವನವು ತೀರ ಕ್ಷಣಿಕವಾಗಿ, ಕ್ಷುಲ್ಲಕವಾಗಿ ಕಾಣಿಸುವುದು. ವಿಶಾಲ ಸಮುದ್ರದಲ್ಲಿ ಒಂದು ಹನಿ ನೀರು ಮೇಲೆದ್ದಂತೆ, ಮತ್ತೆ ಬಿದ್ದಂತೆ, ಅಲೆಗಳ ಮೇಲೆ ಮುಳುಗೇಳುತ್ತ ಸಾಗಿದಂತೆ, ಈ ಜೀವನ. ಇಂಥ ಭಾವನೆಗಳು ಕಣ್ಣಿಗೆ ಕಾಣುವ ಜಗತ್ತಿನ ಹಿಂದಿನ ಅನಂತ ಅಸ್ತಿತ್ವದೆಡೆಗೆ ನಮ್ಮನ್ನು ಕರೆದೊಯ್ಯುವುದು. ಎಲ್ಲ ದೃಶ್ಯಪ್ರಪಂಚದ ಹಿಂದೆ ನಿರಾಕಾರ ಬ್ರಹ್ಮನ ಅಸ್ತಿತ್ವವಿದೆ. ಎಲ್ಲ ಶಬ್ದಪ್ರಪಂಚದ ಹಿಂದೆ ಓಂಕಾರವಿದೆ, ಅದರ ಅಂತಿಮ ಪಾದದಲ್ಲಿ ಅಗಾಧ ಮೌನವಿದೆ. ಅದೇರೀತಿ ಎಲ್ಲ ಅನುಭವಗ್ರಾಹ್ಯ ಸಂಗತಿಗಳ ಹಿಂದೆ ಅಗ್ರಾಹ್ಯವಾದ ಚೈತನ್ಯವಸ್ತುವಿದೆ. ಇದು ಕೊನೆಯಿಲ್ಲದೆ ಸಾಗುವ ನಮ್ಮ ಪಯಣದ ಗುರಿ.

ತೈತ್ತಿರೀಯೋಪನಿಷತ್ತಿನಲ್ಲಿ ಬ್ರಹ್ಮನ ಲಕ್ಷಣವನ್ನು ಹೇಳುವಾಗ, **'ಸತ್ಯಂ ಜ್ಞಾನಮನಂತಂ ಬ್ರಹ್ಮ'** ಎನ್ನಲಾಗಿದೆ. ಇರುವಿಕೆ (ಸತ್), ಚೈತನ್ಯ(ಜ್ಞಾನ) ಹಾಗೂ ಅನಂತ – ಇವು ಬ್ರಹ್ಮನ ಲಕ್ಷಣಗಳು. ಯಾವುದೂ ಕೊನೆಗೊಳ್ಳುವವೋ, ಅವೆಲ್ಲ ಸೃಷ್ಟಿ-ಸ್ಥಿತಿ-ಲಯವೆಂಬ ಅವಸ್ಥೆಗಳಿಗೆ ಒಳಗಾಗುವುದರಿಂದ ಅವು ಆತ್ಯಂತಿಕ ಸತ್ಯವಲ್ಲ. ತ್ರಿಕಾಲಗಳಲ್ಲೂ ಅಬಾಧಿತವಾದ, ಅಳಿವಿಲ್ಲದ ಸತ್ಯ ಯಾವುದೋ ಅದೇ ಬ್ರಹ್ಮ; ಅದು ಅನಂತ. ದೈನಂದಿನ ಬದುಕಿನಲ್ಲಿ ನಾವು ಇದನ್ನು ಕಾಣಲಾರೆವು; ಏಕೆಂದರೆ ಪ್ರಪಂಚದ ಲಕ್ಷಣವೇ ಅದಕ್ಕೆ ವಿರುದ್ಧವಾದದ್ದು; ಸಾಂತ, ನಶ್ವರ ಹಾಗೂ ಬದಲಾಗುವ ಸ್ವಭಾವವುಳ್ಳದ್ದು. ಆದರೆ ಇವೆಲ್ಲದರ ನಡುವೆ 'ಅನಂತ'ದ ಸೂಚಕಗಳಿವೆ; ಶಾಶ್ವತದ, ನಿತ್ಯದ ಸೂಚನೆಗಳಿವೆ. ಅವುಗಳನ್ನು ಕಂಡುಕೊಳ್ಳುವುದೇ ಅನಂತವನ್ನು ತಲುಪುವ ಮೊದಲ ಹೆಜ್ಜೆಯಾಗಿದೆ. ✷